# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2019-20ನೇ ಸಾಲಿನಿಂದ "Library Science and Information Management" ಡಿಪ್ಲೋಮಾ ಪ್ರೋಗ್ರಾಂ ಅನ್ನು "Library and Information Science" ಆಗಿ ಪರಿವರ್ತಿಸಿ ಪ್ರವೇಶಾತಿ ಷರತ್ತುಗಳು ಹಾಗೂ ನಿಭಂದನೆಯನ್ನು ತಿದ್ದುಪಡಿ ಮಾಡುವ ಬಗ್ಗೆ.

*******

**ಓದಲಾಗಿದೆ:-**

1. ಸರ್ಕಾರದ ಪತ್ರ ಸಂಖ್ಯೆ: ಇಡಿ 107 ಟಿಪಿಇ 1987, ದಿನಾಂಕ: 28-07-1987.
2. ಎಐಸಿಟಿಇ, ನವದೆಹಲಿ ಇವರ 2019-20ನೇ ಸಾಲಿನ ಪ್ರವೇಶ ಮಾರ್ಗಸೂಚಿ.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 38 ಡಿವಿಪಿ (2) 2018, ದಿನಾಂಕ: 13-03-2019.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ. (1)ರ ಸರ್ಕಾರದ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ 02 ವರ್ಷಗಳ ಡಿಪ್ಲೋಮಾ ಇನ್ ಲೈಬ್ರರಿ ಸೈನ್ಸ್ ವಿಭಾಗದ ಪ್ರವೇಶಾತಿಗೆ ದ್ವಿತೀಯ ಪಿ.ಯು.ಸಿ ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (2)ರ ಎಐಸಿಟಿಇ ರವರ 2019-20ನೇ ಸಾಲಿನ ಪ್ರವೇಶ ಮಾರ್ಗಸೂಚಿಯಲ್ಲಿ 02 ವರ್ಷದ "Library Science and Information Management" ಡಿಪ್ಲೋಮಾ ಪ್ರೋಗ್ರಾಂ ಅನ್ನು 03 ವರ್ಷ ಅವಧಿಯ "Library and Information Science" ಪ್ರೋಗ್ರಾಂ ಆಗಿ ಪರಿವರ್ತಿಸಿ ದ್ವಿತೀಯ ಪಿ.ಯು.ಸಿ ಬದಲಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು ಎಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (3)ರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಪ್ರಸ್ತಾವನೆಯಲ್ಲಿ ಎಐಸಿಟಿಇ ರವರ 2019-20ನೇ ಸಾಲಿನ ಪ್ರವೇಶ ಮಾರ್ಗಸೂಚಿಯಲ್ಲಿ 02 ವರ್ಷದ "Library Science and Information Management" ಡಿಪ್ಲೋಮಾ ಪ್ರೋಗ್ರಾಂ ಅನ್ನು 03 ವರ್ಷ ಅವಧಿಯ "Library and Information Science" ಪ್ರೋಗ್ರಾಂ ಆಗಿ ಪರಿವರ್ತಿಸಿ ದ್ವಿತೀಯ ಪಿ.ಯು.ಸಿ ಬದಲಾಗಿ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ.35 ರಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾಗಬೇಕು ಎಂದು ತಿಳಿಸಿರುವುದರಿಂದ 2019-20ನೇ ಸಾಲಿನಿಂದ ಜಾರಿಗೆ ಬರುವಂತೆ ಸದರಿ ನಿಯಮಗಳನ್ನು ಜಾರಿಗೊಳಿಸಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 54 ಡಿಟಿಇ 2019.**

**ಬೆಂಗಳೂರು, ದಿನಾಂಕ: 13ನೇ ಜೂನ್ 2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ 2 ವರ್ಷಗಳ "Library Science and Information Management" ಡಿಪ್ಲೋಮಾ ಪ್ರೋಗ್ರಾಂಗಳನ್ನು ಎಐಸಿಟಿಇ ನವದೆಹಲಿ, ಇವರ 2019-20ನೇ ಸಾಲಿನ ಪ್ರವೇಶಾತಿ ಮಾರ್ಗಸೂಚಿ ಪ್ರಕಾರ ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಿದೆ.

| ಕ್ರ.ಸಂ | ವಿಷಯ | ಪ್ರಸ್ತುತ ಜಾರಿಯಲ್ಲಿರುವ ವಿವರ | 2019-20 ರಿಂದ ಪರಿಷ್ಕರಿಸಿದ ವಿವರ |
|---|---|---|---|
| 01 | ಶೀರ್ಷಿಕೆ | "Library Science and Information Management" | "Library and Information Science" |
| 02 | ಕೋರ್ಸ್ ಅವಧಿ | 02 ವರ್ಷ | 03 ವರ್ಷ |
| 03 | ವಿದ್ಯಾರ್ಹತೆ ನಿಗಧಿ | 2ನೇ ಪಿ.ಯು.ಸಿ/ 12th with 45 marks | SSLC/ 10th std, 35% marks |

JD (Plan)/CDC/Exam

ACM/CDC/Exam/DVP(2)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಅವರ ಹೆಸರಿನಲ್ಲಿ,

13/6/19

ಮನೋರಮ ಡಿ.ಸಿ.,
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

**ಪ್ರತಿ:-**

1. ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
2. ಕಾರ್ಯದರ್ಶಿಗಳು, ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
3. ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಪ್ರಾಂಶುಪಾಲರಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ)
4. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
6. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿ / ಒಡಿಜಿಸಿ

ಹಿಂಬರಹ ಸಂಖ್ಯೆ: ಡಿಟಿಇ 38 ಡಿವಿಪಿ(2) 2018 ದಿನಾಂಕ: 14/06/2019.

ಸರ್ಕಾರದ ಪತ್ರದ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಈ ಕೆಳಕಂಡ ಅಧಿಕಾರಿಗಳಿಗೆ ಹಾಗೂ ವಿಭಾಗಗಳಿಗೆ ಕಳುಹಿಸಲಾಗಿದೆ.

01. ಸಂಬಂಧಪಟ್ಟ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ
02. ಜಂಟಿ ನಿರ್ದೇಶಕರು [ಆಡಳಿತ/ ಪರೀಕ್ಷೆ/ ತನಿಖೆ/ ಎಟಿಎಸ್]
03. ಉಪ ನಿರ್ದೇಶಕರು [ಯೋಜನೆ/ ಪರೀಕ್ಷೆ/ ತನಿಖೆ]
04. ಸಹಾಯಕ ನಿರ್ದೇಶಕರು [ಯೋಜನೆ/ ಪರೀಕ್ಷೆ/ ತನಿಖೆ/ ಎಂಪಿಸಿ]
05. ಉಪ ನಿರ್ದೇಶಕರು (ಸಾಂಖ್ಯಿಕ ವಿಭಾಗ)
06. ಆಡಳಿತಾಧಿಕಾರಿಗಳಿಗೆ
07. ರಿಜಿಸ್ಟ್ರಾರ್ (ಪರೀಕ್ಷೆ / ಎಸಿಎಂ)
08. ಅಧೀಕ್ಷಕರು, ಎಸಿಎಂ ವಿಭಾಗ
09. ಕಾರ್ಯನಿರ್ವಾಹಕರು, ಎಸಿಎಂ(2) ವಿಭಾಗ
10. ಕಾರ್ಯನಿರ್ವಾಹಕರು, ಡಿವಿಪಿ(1) ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಈ ಗೌರ್‌ನೆನ್ಸ್ ಸೆಲ್‌ಗೆ
13. ಕಛೇರಿ ಪ್ರತಿ

ಜಂಟಿ ನಿರ್ದೇಶಕರು (ಎಟಿಎಸ್)

14/6/19